# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 195 |
| ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 16.07.2024. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯಲ್ಲಿ ಎಷ್ಟು ಮರಳು ನಿಕ್ಷೇಪಗಳನ್ನು ಗುರುತಿಸಲಾಗಿದೆ. ಅವು ಯಾವುವು;</td><td>ಪ್ರಸ್ತುತ, ಕಲಬುರಗಿ ಜಿಲ್ಲೆಯಲ್ಲಿ ಜಿಲ್ಲಾ ಮರಳು ಸಮಿತಿಯಿಂದ ಈಗಾಗಲೇ ಚಾಲ್ತಿಯಲ್ಲಿರುವ 05 ಮರಳು ಗುತ್ತಿಗೆ ಪ್ರದೇಶಗಳು ಮತ್ತು ಹೊಸದಾಗಿ ಗುರುತಿಸಿರುವ 06 ಮರಳು ನಿಕ್ಷೇಪಗಳು ಸೇರಿದಂತೆ ಒಟ್ಟು 11 ಮರಳು ನಿಕ್ಷೇಪ ಪ್ರದೇಶಗಳನ್ನು ಗುರುತಿಸಲಾಗಿರುತ್ತದೆ.<br>ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಸಾರ್ವಜನಿಕರು ಮರಳನ್ನು ಪಡೆಯಲು ಸರ್ಕಾರ ನಿಗದಿ ಪಡಿಸಿರುವ ಮೊತ್ತವೆಷ್ಟು; ಇದರಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮರಳು ನಿಕ್ಷೇಪಗಳಲ್ಲಿ ಸಾರ್ವಜನಿಕರಿಗೆ ಮರಳು ವಿತರಿಸಲಾಗಿದೆ. ಇದರಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು; ಮರಳು ಪಡೆಯಲು ಇರುವ ಮಾನದಂಡಗಳೇನು (ಮರಳು ನೀತಿಯ ಸಂಪೂರ್ಣ ವಿವರ ನೀಡುವುದು)</td><td>ಸಾರ್ವಜನಿಕರಿಗೆ ಮರಳನ್ನು ಪೂರೈಸಲು ಹೊಸ ಮರಳು ನೀತಿ, 2020 ರಂತೆ ಸರ್ಕಾರದ ಆದೇಶ ಸಂಖ್ಯೆ ಸಿಐ 344 ಎಂಎಂಎನ್ 2019 (ಭಾಗ-2), ದಿನಾಂಕ 10.07.2020 ರಲ್ಲಿ, IV, V ಮತ್ತು VI ನೇ ಶ್ರೇಣಿಯ ಹೊಳೆ / ನದಿ ಪಾತ್ರ / ಅಣೆಕಟ್ಟು / ಜಲಾಶಯ / ಬ್ಯಾರೇಜ್ ಹಾಗೂ ಅವುಗಳ ಹಿನ್ನೀರಿನ ಪ್ರದೇಶದಲ್ಲಿನ ಮರಳು ವಿಲೇವಾರಿಗೆ ಪ್ರತಿ ಟನ್ ಮರಳಿಗೆ ₹700/- ಗಳನ್ನು ನಿಗದಿಪಡಿಸಲಾಗಿರುತ್ತದೆ. ಅಂತೆಯೇ, I, II ಮತ್ತು III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಗಳಿಗೆ ₹300/- ಗಳನ್ನು ನಿಗದಿಪಡಿಸ ಲಾಗಿರುತ್ತದೆ.<br>• ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಜಿಲ್ಲಾ ವ್ಯಾಪ್ತಿಯಲ್ಲಿ ಮರಳು ಗಣಿಗಾರಿಕೆಯಿಂದ ಸಂಗ್ರಹಿಸ ಲಾಗಿರುವ ರಾಜಧನ, ಹೆಚ್ಚುವರಿ ನಿಯತ ಕಾಲಿಕ ಮೊತ್ತ / ಹೆಚ್ಚುವರಿ ಮೊತ್ತ ಹಾಗೂ ಡಿ.ಎಂ.ಎಫ್ ಶುಲ್ಕದ ವಿವರಗಳು ಈ ಕೆಳಕಂಡಂತಿರುತ್ತದೆ.<br>(₹ಲಕ್ಷ ಗಳಲ್ಲಿ)<br><table><tr><th>ವರ್ಷ</th><th>ಮರಳಿನ ಪ್ರಮಾಣ (MMT ಗಳಲ್ಲಿ)</th><th>ಸಂಗ್ರಹಿಸ ಲಾದ ರಾಜಧನ</th><th>ಸಂಗ್ರಹಿಸ ಲಾದ APP & AP</th><th>ಸಂಗ್ರಹಿಸ ಲಾದ DMF</th></tr><tr><td>2021-22</td><td>133820</td><td>107.07</td><td>151.22</td><td>10.71</td></tr><tr><td>2022-23</td><td>303499</td><td>242.80</td><td>154.13</td><td>24.29</td></tr><tr><td>2023-24</td><td>409289</td><td>327.43</td><td>132.60</td><td>32.73</td></tr></table></td></tr>
</table>

. . . 2

| | | |
|---|---|---|
| | | • ಪ್ರಸ್ತುತ, ಟೆಂಡರ್ ಕಂ ಹರಾಜು ಮೂಲಕ ಗುತ್ತಿಗೆ ಪಡೆದ ಮರಳು ಗುತ್ತಿಗೆದಾರರು ಮತ್ತು ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಲೈಸನ್ಸ್ ಪಡೆದವರು ಪ್ರತಿ ಮೆಟ್ರಿಕ್ ಟನ್ ಮರಳಿಗೆ ಶೆಡ್ಯೂಲ್ II-A ರಲ್ಲಿ ನಿಗದಿಪಡಿಸಿರುವ ರಾಜಧನ ಮೊತ್ತ, ಹೆಚ್ಚುವರಿ ನಿಯತಕಾಲಿಕ ಮೊತ್ತ / ಹೆಚ್ಚುವರಿ ಮೊತ್ತ ಹಾಗೂ ಇತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 42 ರಂತೆ ಮರಳು ಸಾಗಾಣಿಕೆಗೆ ಪರವಾನಗಿ ಪಡೆದು ಮರಳನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳಬಹುದಾಗಿದೆ.<br>• ಮರಳು ನೀತಿ, 2020 ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021 ರಲ್ಲಿ ಸಾರ್ವಜನಿಕರಿಗೆ ಆನ್ ಲೈನ್ (ಮರಳು ಮಿತ್ರ) ವ್ಯವಸ್ಥೆಯಡಿ ಮರಳು ಬುಕಿಂಗ್ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ, ಸಾರ್ವಜನಿಕರು ಮೂಬೈಲ್ ಆ್ಯಪ್ (ಮರಳು ಮಿತ್ರ) ಅಥವಾ www.sand.karnataka.gov.in ವೆಬ್ ಪೋರ್ಟಲ್ ನಲ್ಲಿ ಮೊಬೈಲ್ ಸಂಖ್ಯೆ ಮತ್ತು ಆಧಾರ್ ಸಂಖ್ಯೆಯೊಂದಿಗೆ ನೊಂದಾಯಿಸಿ ಅವಶ್ಯಕತೆಗೆ ತಕ್ಕಂತೆ ಮರಳಿನ ಮಾರಾಟ ದರ, ಸಾಗಾಣಿಕೆ ವೆಚ್ಚ ಹಾಗೂ ಇತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿ ಮರಳನ್ನು ಪಡೆಯುತ್ತಿರುತ್ತಾರೆ. |
| ಇ) | ಕಲಬುರಗಿ ಜಿಲ್ಲೆಯಲ್ಲಿ ಯಾವ ಯಾವ ಕಲ್ಲು ಗಣಿಗಾರಿಕೆ ಕಷ್ಟರ್ ಗಳಿಂದ ಸರ್ಕಾರಕ್ಕೆ ಎಷ್ಟು ರಾಜಧನ ಸಂದಾಯವಾಗಿದೆ; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು) | • ಕಲಬುರಗಿ ಜಿಲ್ಲಾ ವ್ಯಾಪ್ತಿಯಲ್ಲಿ ಕಲ್ಲು ಗಣಿಗಾರಿಕೆಗೆ 66, ಶಹಬಾದ್ ಶಿಲೆ ಗಣಿಗಾರಿಕೆಗೆ 200, ಮುರ್ರಂ ಖನಿಜ ಗಣಿಗಾರಿಕೆಗೆ 113 ಮತ್ತು ಫುಲ್ಲರ್ಸ್ ಅರ್ಥ್ ಖನಿಜ ಗಣಿಗಾರಿಕೆಗಾಗಿ 05 ಗುತ್ತಿಗೆ / ಲೈಸೆನ್ಸ್ / ಕಾರ್ಯಾನುಮತಿಗಳನ್ನು ಮಂಜೂರು ಮಾಡಲಾಗಿರುತ್ತದೆ.<br>• ಸದರಿ ಉಪಖನಿಜದ ಗುತ್ತಿಗೆದಾರರು / ಲೈಸೆನ್ಸ್ ದಾರರಿಂದ ಪ್ರತಿ ಮೆಟ್ರಿಕ್ ಟನ್ ರಾಜಧನ, ಹೆಚ್ಚುವರಿ ಮೊತ್ತ ಮತ್ತು ಡಿ.ಎಂ.ಎಫ್ ಶುಲ್ಕಗಳನ್ನು ಸಂಗ್ರಹಿಸಲಾಗಿರುತ್ತದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಂತೆ, ಕಲ್ಲುಗಣಿ ಗುತ್ತಿಗೆ ಪ್ರದೇಶದಿಂದ ಕ್ರಷರ್ ಘಟಕಕ್ಕೆ ಉಪಖನಿಜ ಪೂರೈಕೆಯಾಗುವ ಸಮಯದಲ್ಲಿ ರಾಜಧನ ಸಂದಾಯವಾಗುವುದರಿಂದ, ಅದೇ ಉಪಖನಿಜವನ್ನು ಕ್ರಷರ್ ಘಟಕದಲ್ಲಿ ಬಳಕೆ ಮಾಡಿಕೊಂಡು ಉತ್ಪತ್ತಿಯಾಗುವ ಉಪ ಉಪಖನಿಜದ ಉತ್ಪನ್ನಗಳಿಗೆ ಮತ್ತೊಮ್ಮೆ ರಾಜಧನ ಪಾವತಿಸಬೇಕಾಗಿರುವುದಿಲ್ಲ. ಕ್ರಷರ್ ಘಟಕದ ಮಾಲೀಕರು ಸಂಸ್ಕರಿಸಿದ ಕಟ್ಟಡ ಕಲ್ಲಿನ ಉಪ ಉತ್ಪನ್ನಗಳಿಗೆ ಸೆಕೆಂಡರಿ ಖನಿಜ ರವಾನೆ ಪರವಾನಿಗೆಗಳನ್ನು ಪಡೆದು ಸಾಗಾಣಿಕೆ ಮಾಡಬೇಕಾಗಿರುತ್ತದೆ.<br>• ಕಲಬುರಗಿ ಜಿಲ್ಲೆಯಲ್ಲಿ ಕಳೆದ 03 ವರ್ಷಗಳ ಸಾಲಿನಲ್ಲಿ ಕಲ್ಲು ಗಣಿಗಾರಿಕೆಯಿಂದ ಸಂಗ್ರಹವಾಗಿರುವ ರಾಜಧನ, ಹೆಚ್ಚುವರಿ ಮೊತ್ತ ಮತ್ತು ಡಿ.ಎಂ.ಎಫ್ ಶುಲ್ಕದ ವಿವರಗಳು ಈ ಕೆಳಕಂಡಂತಿದೆ. |

. . . 3

| ಕ್ರ. ಸಂ. | ವರ್ಷ | ಉಪ ಖನಿಜ ಗಳ ಉತ್ಪಾದನೆ ಪ್ರಮಾಣ (ಮೆಟ್ರಿಕ್ ಟನ್ ಗಳಲ್ಲಿ) | ರಾಜಧನ (₹ಗಳಲ್ಲಿ) | ಹೆಚ್ಚುವರಿ ಪಾವತಿ ಮೊತ್ತ (₹ಗಳಲ್ಲಿ) | ಡಿ.ಎಂ. ಎಫ್ (₹ಗಳಲ್ಲಿ) | ಒಟ್ಟು ಮೊತ್ತ (₹ಗಳಲ್ಲಿ) |
|---|---|---|---|---|---|---|
| 1 | 2021-22 | 1322308 | 30090615 | 13716478 | 3418838 | 47225931 |
| 2 | 2022-23 | 1577902 | 72364606 | 34054153 | 7680802 | 114099561 |
| 3 | 2023-24 | 3900995 | 154871222 | 87097385 | 6258093 | 248226700 |
| ಒಟ್ಟು | | 6801205 | 257326443 | 134868016 | 17357733 | 409552192 |

**ಈ)** ಈ ಕಲ್ಲು ಗಣಿಗಾರಿಕೆಗೆ ಓಡಾಡುವ ಭಾರಿ ವಾಹನಗಳಿಂದ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು)

- ಕಲಬುರಗಿ ಜಿಲ್ಲಾ ವ್ಯಾಪ್ತಿಯಲ್ಲಿ, ಕಲ್ಲು ಗಣಿಗಾರಿಕೆಗೆ ಓಡಾಡುವ ಅಧಿಕ ಭಾರದ ವಾಹನಗಳಿಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ತಾಂತ್ರಿಕ ಅಧಿಕಾರಿಗಳು ಹಾಗೂ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸಮಿತಿ ಸದಸ್ಯರುಗಳಿಂದ ಗಸ್ತು ಕಾರ್ಯ ನಡೆಸಿ, ವಾಹನಗಳಿಗೆ ದಂಡ ವಿಧಿಸಲಾಗಿರುತ್ತದೆ.
- ಕಲಬುರಗಿ ಜಿಲ್ಲಾ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಡಿ.ಎಂ.ಎಫ್ (PMKKKY) ಅಡಿಯಲ್ಲಿ ಅನುದಾನ ಬಿಡುಗಡೆಗೊಳಿಸಿ, ರಸ್ತೆ ದುರಸ್ತಿ ಕಾರ್ಯ ಕೈಗೊಳ್ಳಲಾಗುತ್ತಿದೆ.
- ತಾಲ್ಲೂಕುವಾರು ರಸ್ತೆ ಕಾಮಗಾರಿಗಳ ಸಂಖ್ಯೆ ಅನುದಾನದ ಮೊತ್ತ ಹಾಗೂ ಬಿಡುಗಡೆಗೊಳಿಸಲಾದ ಅನುದಾನದ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ತಾಲ್ಲೂಕು | ಕಾಮಗಾರಿಗಳ ಸಂಖ್ಯೆ | ಅನುದಾನದ ಮೊತ್ತ (₹ಲಕ್ಷಗಳಲ್ಲಿ) | ಬಿಡುಗಡೆ ಮಾಡಿದ ಮೊತ್ತ (₹ಲಕ್ಷಗಳಲ್ಲಿ) |
|---|---|---|---|---|
| 1 | ಸೇಡಂ | 93 | 3913.12 | 2168.10 |
| 2 | ಚಿಂಚೋಳಿ | 25 | 1395.68 | 278.84 |
| 3 | ಚಿತ್ತಾಪೂರ | 31 | 2655.88 | 946.09 |
| 4 | ಅಫಜಲಪೂರ | 11 | 174.00 | 22.83 |
| 5 | ಆಳಂದ | 10 | 1120.54 | 0.00 |
| 6 | ಜೇವರ್ಗಿ | 23 | 160.25 | 12.36 |
| 7 | ಕಲಬುರಗಿ | 58 | 1992.30 | 477.17 |
| ಒಟ್ಟು | | 251 | 11411.77 | 3905.39 |

**ಉ)** ಕಲಬುರಗಿ ಜಿಲ್ಲೆಯಲ್ಲಿ ಬರುವ ಸಿಮೆಂಟ್ ಕಾರ್ಖಾನೆ ಗಳಿಂದ ಸರ್ಕಾರಕ್ಕೆ ಬರುವ ರಾಜಧನ ಎಷ್ಟು; ಈ ಕಾರ್ಖಾನೆ ಗಳಿಂದ -

- ಕಲಬುರಗಿ ಜಿಲ್ಲೆಯಲ್ಲಿ ಸಿಮೆಂಟ್ ಕಾರ್ಖಾನೆಗಳಿಗೆ ಗಣಿ ಗುತ್ತಿಗೆಯಿಂದ ಸುಣ್ಣದ ಕಲ್ಲನ್ನು ಸಾಗಾಣಿಕೆ ಮಾಡಲು ಪಾವತಿಸಿರುವ ರಾಜಧನ, ಡಿ.ಎಂ.ಎಫ್ ಹಾಗೂ ಎನ್.ಎಂ.ಇ.ಟಿ ವಿವರಗಳು ಈ ಕೆಳಕಂಡಂತಿರುತ್ತದೆ.

ಉ) -ಓಡಾಡುವ ವಾಹನಗಳಿಂದ ಹಾಳಾದ ರಸ್ತೆ ಎಷ್ಟು; ಮತ್ತು ಈ ಸಿಮೆಂಟ್ ಕಾರ್ಖಾನೆಗಳ ಧೂಳಿನಿಂದ ರೈತರ ಬೆಳೆ ಹಾನಿಯಾಗುತ್ತಿರುವ ಮತ್ತು ಈ ಕಾರ್ಖಾನೆಗಳ ಸುತ್ತಮುತ್ತ ವಾಸಿಸುತ್ತಿರುವ ಜನರ ಆರೋಗ್ಯ ಕೂಡಾ ಹಾಳಾಗುತ್ತಿದ್ದು, ಈ ಕುರಿತು ಸರ್ಕಾರ ಗಮನ ಹರಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತು ತೆಗೆದು ಕೊಂಡ ಕ್ರಮ ಗಳೇನು? (ಮಾಹಿತಿ ನೀಡುವುದು).

(₹ಗಳಲ್ಲಿ)

| ಕ್ರ. ಸಂ. | ವರ್ಷ | ರಾಜಧನ | ಡಿ.ಎಂ.ಎಫ್ | ಎನ್.ಎಂ.ಇ.ಟಿ | ಒಟ್ಟು |
|---|---|---|---|---|---|
| 1 | 2020-21 | 2216615520 | 627435056 | 44332310.4 | 2888382886 |
| 2 | 2021-22 | 2606403840 | 781921152 | 52128076.8 | 3440453069 |
| 3 | 2022-23 | 2637426480 | 791227944 | 52748529.6 | 3481402954 |
| ಒಟ್ಟು | | 7460445840 | 2200584152 | 149208916.8 | 9810238909 |

- ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿ ಇರುವ ಎಲ್ಲಾ ಸುಣ್ಣದ ಕಲ್ಲಿನ ಗಣಿ ಗುತ್ತಿಗೆಗಳು ಅಂತಿಮ ಬಳಕೆಗೆ ಮಂಜೂರಾಗಿರುವ ಗಣಿ ಗುತ್ತಿಗೆಗಳಾಗಿರುತ್ತವೆ. ಸದರಿ ಗಣಿಗುತ್ತಿಗೆಗಳಿಗೆ ಸುಣ್ಣದ ಕಲ್ಲನ್ನು ಸಿಮೆಂಟ್ ಕಾರ್ಖಾನೆಗೆ ಕನ್ವೇಯರ್ ಬೆಲ್ಟ್ ಮುಖಾಂತರವೇ ಸರಬರಾಜು ಮಾಡಲಾಗುತ್ತಿರುತ್ತದೆ. ರಸ್ತೆಯ ಮುಖಾಂತರ ಸುಣ್ಣದ ಕಲ್ಲನ್ನು ಕಾರ್ಖಾನೆಗೆ ಸಾಗಾಣಿಕೆ ಮಾಡುತ್ತಿರುವುದಿಲ್ಲ. ಆದರೆ, ಅಂತಿಮ ಉತ್ಪನ್ನವಾದ ಸಿಮೆಂಟ್ ರೈಲ್ವೆ ಹಾಗೂ ರಸ್ತೆ ಮುಖಾಂತರ ಸಾಗಾಣಿಕೆಯಾಗುತ್ತದೆ.
- ಉಪ ಪ್ರಶ್ನೆ (ಈ) ರಲ್ಲಿ ಉತ್ತರಿಸಿರುವಂತೆ ಕಲಬುರಗಿ ಜಿಲ್ಲಾ ಗಣಿಬಾಧಿತ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾಳಾಗಿರುವ ರಸ್ತೆಗಳ ಅಭಿವೃದ್ಧಿಗೆ ಡಿ.ಎಂ.ಎಫ್ ನಿಧಿಯಿಂದ ಒಟ್ಟು ₹114.11 ಕೋಟಿಗಳನ್ನು ಮೀಸಲಿರಿಸಿದ್ದು, ಅಭಿವೃದ್ಧಿಪಡಿಸಲಾಗುತ್ತಿದೆ.
- ಸಿಮೆಂಟ್ ಕಾರ್ಖಾನೆಗಳ ಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿಗಾರಿಕೆ ಧೂಳಿನಿಂದ ರೈತರ ಬೆಳೆ ಹಾನಿಗೆ ಸಂಬಂಧಿಸಿದ ದೂರುಗಳ ಕುರಿತು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೆ.ಎಸ್.ಪಿ.ಸಿ.ಬಿ ಕಂದಾಯ ಇಲಾಖೆ ಮತ್ತು ಕೃಷಿ ಇಲಾಖೆಗಳನ್ನು ಒಳಗೊಂಡಂತೆ ಜಂಟಿ ಸ್ಥಳ ಪರಿಶೀಲನೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ ಸಿಐ-ಎಂಎಂಎನ್/153/2024

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ-01

ಅನುಬಂಧ-

ಚಾಲ್ತಿಯಲ್ಲಿರುವ ಮರಳು ಬ್ಲಾಕ್‌ಗಳ ವಿವರ:

| ಕ್ರ. ಸಂ. | ತಾಲ್ಲೂಕು | ಗ್ರಾಮ | ವಿಸ್ತೀರ್ಣ (ಎಕರೆ) | ಸರ್ವೆ ನಂ. | ನದಿ |
|---|---|---|---|---|---|
| 1 | ಸೇಡಂ | ಸಂಗಾವಿ(ಟಿ) | 6–00 | 9, 10, 11 ರ ಎದುರು | ಕಾಗಿಣಾ ನದಿ |
| 2 | ಸೇಡಂ | ಬೀರನಳ್ಳಿ & ಅರೆಬೊಮ್ಮನಳ್ಳಿ | 8–00 | 20 ರ ಎದುರು | ಕಾಗಿಣಾ ನದಿ |
| 3 | ಸೇಡಂ | ಲೋಹಾಡ & ಹಾಬಾಳ(ಟಿ) | 9–00 | 13, 14 & 136, 124 | ಕಾಗಿಣಾ ನದಿ |
| 4 | ಅಫಜಲಪೂರ | ಟಾಕಳಿ | 15–00 | 12, 13, 14 | ಭೀಮಾ ನದಿ |
| 5 | ಚಿತ್ತಾಪೂರ | ಭಾಗೋಡಿ | 40–00 | 67, 59 & 16(ಪಿ) | ಕಾಗಿಣಾ ನದಿ |
| | | ಹೊಸದಾಗಿ ಗುರುತಿಸಿರುವ ಮರಳು ಬ್ಲಾಕ್‌ಗಳ ವಿವರ: | | | |
| 6 | ಅಫಜಲಪೂರ | ಘತ್ತರಗಾ–2 | 8–00 | ಎದುರುಗಡೆ ಸ.ನಂ.62, 63 | ಭೀಮಾ ನದಿ |
| 7 | ಅಫಜಲಪೂರ | ಹಾವಳಗಾ | 17–00 | ಎದುರುಗಡೆ ಸ.ನಂ.102, 105 & 101, 106(ಪಿ) | ಭೀಮಾ ನದಿ |
| 8 | ಜೇವರ್ಗಿ | ಮಬರಿ | 11–00 | ಎದುರುಗಡೆ ಸ.ನಂ.178, 182 | ಭೀಮಾ ನದಿ |
| 9 | ಜೇವರ್ಗಿ | ನೆಲೋಗಿ | 12–00 | ಎದುರುಗಡೆ ಸ.ನಂ.484/2, 514/1,2 & 516, 517 | ಭೀಮಾ ನದಿ |
| 10 | ಚಿಂಚೋಳಿ | ಪೋತಂಗಲ್ | 10–00 | ಎದುರುಗಡೆ ಸ.ನಂ.66, 67, 73, 74 | ಕಾಗಿಣಾ ನದಿ |
| 11 | ಚಿಂಚೋಳಿ | ಹಲಕೋಡಾ | 5–00 | ಎದುರುಗಡೆ ಸ.ನಂ.72, 74(ಪಿ) | ಕಾಗಿಣಾ ನದಿ |

CI - 153 - MMN - 2024

ಉಪನಿರ್ದೇಶಕರು
ಗಣಿ ಮತ್ತು ಭೂ ವಿಜ್ಞಾನ ಇಲಾಖೆ
ಕಲಬುರಗಿ